

# ಹೂ ಮುತ್ತು... ಆ ಮತ್ತು...

**ಹಳದಿ ಪಟ್ಟೆ– ಉದ್ದ ಮೀಸೆಯ ಕಣಜ, ಹೂವಿಗೆ ಮುತ್ತಿಟ್ಟು ಮಕರಂದ ಹೀರುವ ಕ್ಷಣಗಳು ಕ್ಯಾಮೆರಾದಲ್ಲಿ ದಾಖಲಾದವು. ಈ ಕೀಟದ ಕುರಿತು ಕೆಲವು ಕುತೂಹಲಕಾರಿ ವಿಷಯಗಳೂ ತೆರೆದುಕೊಂಡವು.**

**■ ಶಶಿಧರಸ್ವಾಮಿ ಆರ್‌. ಹಿರೇಮಠ**

ಮ್ಯಾಕ್ರೊ ಫೋಟೊಗ್ರಫಿ ಪ್ರಾರಂಭಿಸಿದಾಗಿನಿಂದಲೂ ನನಗೆ ಸವಾಲಾಗಿದ್ದು ಕೀಟಗಳು ಹಾರುವ ಭಂಗಿಯ ಫೋಟೊ ಕ್ಲಿಕ್ಕಿಸುವುದು. ಕೀಟಗಳು ಹಾರುವ ಸ್ಥಿರ ಭಂಗಿಯ ಫೋಟೊ ತೆಗೆಯಲು ಈ ಹಿಂದೆ ಅನೇಕ ಸಲ ಪ್ರಯತ್ನಪಟ್ಟು ವಿಫಲನಾಗಿದ್ದರೂ, ಆಗ ಮಾಡಿದ ತಪ್ಪುಗಳ ಅರಿವಿನಲ್ಲೇ, ಕ್ಯಾಮೆರಾಗೆ ಮ್ಯಾಕ್ರೊಲೆನ್ಸ್‌ ಹಾಕಿ ಸೂಕ್ತ ಸೆಟ್ಟಿಂಗ್‌ ಮಾಡಿ ಕುರುಚಲು ಕಾಡಿನತ್ತ ಹೊರಟೆ.

ದರೋಡೆನೊಣ, ಏಕಾಂತನೊಣ, ಜೇನುನೊಣ, ದುಂಬಿ, ಕಣಜಗಳು ನನ್ನ ಮನದಂಗಳದ ಪರದೆಯಲ್ಲಿ ಸುಳಿದಾಡುತ್ತಿದ್ದವು.

ಸುಯ್ಯನೆ ಹಾರುವ ಕೀಟಗಳನ್ನು ಬೆನ್ನತ್ತಿ ಓಡೋಡಿ ಸುಸ್ತಾದೆ. ದಣಿವು ನಿವಾರಿಸಿಕೊಳ್ಳಲು ಚದುರಂಗ ಗಿಡದ ಪೊದೆ ಬಳಿ ನಿಂತೆ. ಅದೇ ಸಮಯಕ್ಕೆ ಕಣಜವೊಂದು ಚದುರಂಗದ ಹೂವಿನ ಮಕರಂದ ಸವಿಯುತ್ತಿರುವುದು ಕಾಣಿಸಿತು.

ತಕ್ಷಣವೇ ಸಿದ್ಧನಾಗಿ ಹೂವಿನತ್ತ ಕ್ಯಾಮೆರಾ ಫೋಕಸ್‌ ಮಾಡಿದೆ. ಆ ಹೂವಿನ ಮಕರಂದ ಸವಿದು ಮುಗಿಸಿದ ಹಳದಿ ಪಟ್ಟೆಯ ಉದ್ದ ಮೀಸೆಯ ಕಣಜ ಮತ್ತೊಮ್ಮೆ ಮಕರಂದ ಹೀರಲು ತನ್ನ ಹಿಂಗಾಲುಗಳನ್ನು ಹಿಮ್ಮುಖವಾಗಿಯೂ ಮುಂಗಾಲುಗಳನ್ನು ಮುಂದಕ್ಕೂ ಚಾಚಿ, ಗಾಳಿಯಲ್ಲಿ ರೆಕ್ಕೆಗಳನ್ನು ಮೇಲೆ ಕೆಳಗೆ ರಭಸವಾಗಿ ಬಡಿಯುತ್ತ ಹೂವಿಗೆ ಮುತ್ತಿಡುವ ಪ್ರಯತ್ನದಲ್ಲಿದ್ದಾಗ ನಾಲ್ಕಾರು ಫೋಟೊ ಕ್ಲಿಕ್ಕಿಸಿದೆ. ಅಂತೂ ಇಂತೂ ಕೀಟದ ಹಾರುವ ಭಂಗಿಯ ಚಿತ್ರ ಕ್ಲಿಕ್ಕಿಸಿ ಸಫಲನಾದ ಖುಷಿ ನನ್ನಲ್ಲಿ.

ಆ ಕೀಟ ‘ಹಳದಿ ಪಟ್ಟೆಯ ಇಚ್‌ನ್ಯೂಮನ್



ಕಣಜ’. ‘ಹಳದಿ ಪಟ್ಟೆಯ ಉದ್ದ ಮೀಸೆಯ ಕಣಜ’ ಎಂದೂ ಇದಕ್ಕೆ ಹೆಸರು. ಇಂಗ್ಲಿಷ್‌ನಲ್ಲಿ ‘ಎಲ್ಲೋ ಬ್ಯಾಂಡೆಡ್‌ ಇಚ್‌ನ್ಯೂಮೊನಿಡ್‌ ವಾಸ್ಪ್‌’ ಅಥವಾ ‘ಎಲ್ಲೋ ಬ್ಯಾಂಡೆಡ್‌ ಇಚ್‌ನ್ಯೂಮನ್‌ ವಾಸ್ಪ್‌’ ಎನ್ನುತ್ತಾರೆ. ಎಕ್ಥ್ರೋಮಾರ್ಫಾ ಅಗ್ರೆಸ್ಟೋರಿಯಾ **(Echthromorpha agrestoria)** ಈ ಕೀಟದ ವೈಜ್ಞಾನಿಕ ಹೆಸರು. ಸಂಧಿಪದಿಗಳ, ಕೀಟವರ್ಗದ, ಪೊರೆಪಕ್ಷೀಯ ಹೈಮೆನೋಪ್ಟೆರಾ ಎಂಬ ಗಣದ, ಇಚ್‌ನ್ಯೂಮೊನಿಡೆ ಕುಟುಂಬಕ್ಕೆ ಸೇರಿದ ಕೀಟವಿದು.

ಇಚ್‌ನ್ಯೂಮನ್‌ ಎಂದರೆ ಉದ್ದವಾದ ಗ್ರಹಣಾಂಗಗಳೊಂದಿಗಿನ ತೆಳು ಹಾಗೂ ಉದ್ದ ದೇಹವಿರುವ ಪರಾವಲಂಬಿ ಕಣಜ ಎಂದರ್ಥ. ಮೊಟ್ಟೆಗಳನ್ನು ಇತರ ಕೀಟಗಳ ಲಾರ್ವಾಗಳಲ್ಲಿ, ಮೇಲೆ ಅಥವಾ ಹತ್ತಿರ ಇಡುವುದು ಈ ಕೀಟದ ವೈಶಿಷ್ಟ್ಯ.

ಉದ್ದ ಮೀಸೆ, ತೆಳು ನಡುವಿನ, ಹಳದಿ–ಕಪ್ಪು ಪಟ್ಟೆಗಳಿರುವ ಪರಾವಲಂಬಿ ಕಣಜ ಇದು. ಎಲ್ಲಾ ಕಣಜಗಳಂತೆ ಕಿರಿದಾದ ಸೊಂಟ ಹಾಗೂ ಉದ್ದ–ತೆಳ್ಳಗಿನ ದೇಹ ಇದರದ್ದು. ತಲೆ, ಎದೆ ಮತ್ತು ಹೊಟ್ಟೆಯ ಭಾಗ ಹೊಳೆವ ಹಳದಿ ವರ್ಣದಿಂದ ಕೂಡಿವೆ. ಕಾಲುಗಳು ಹಳದಿ ಹಾಗೂ ಕಿತ್ತಳೆ ಬಣ್ಣದವು. ಕಪ್ಪಾಗಿರುವ ಕಣ್ಣುಗಳು ದೊಡ್ಡ ಗಾತ್ರದವು. ಪಾರದರ್ಶಕ ರೆಕ್ಕೆಗಳು ಕಪ್ಪು ವ್ಯೂಹನಾಳಗಳೊಂದಿಗೆ ಸ್ಪಷ್ಟವಾಗಿ ಕಾಣುತ್ತವೆ. ವಯಸ್ಕ ಕಣಜಗಳು ಸಾಮಾನ್ಯವಾಗಿ ಹಗಲಿನಲ್ಲಿ ಸಕ್ರಿಯವಾಗಿದ್ದು, ಹೂವುಗಳ ಮಕರಂದ ಸವಿಯುತ್ತವೆ.

‘ಹೋಲೊಮೆಟಬಾಲಿಸಂ’ ಎನ್ನುವ ಸಂಪೂರ್ಣ ರೂಪಾಂತರ ಜೀವನಚಕ್ರ ನಡೆಸುವ ಪರಾವಲಂಬಿ ಹೆಣ್ಣು ಕಣಜ ತನ್ನ ಹೊಟ್ಟೆಯ ತುದಿಯಲ್ಲಿ ಉದ್ದ ಮತ್ತು ಚೂಪಾಗಿರುವ ಅಂಡನಾಳ ಅಥವಾ ಅಂಡವಿಧಾಯಕ **(Ovipositors)** ಅಂಗ ಹೊಂದಿದೆ. ಈ ಅಂಗದ ಸಹಾಯದಿಂದ ಚಿಟ್ಟೆಯ ಕಂಬಳಿಹುಳಗಳ ಮೇಲೆ ಮೊಟ್ಟೆಗಳನ್ನು ಇಟ್ಟು, ಮೊಟ್ಟೆಗಳಿಗೆ ಬೇಕಾದ ಪ್ರೊಟೀನ್‌ ಹಾಗೂ ಕಂಬಳಿಹುಳು ಕೆಡದಂತೆ ಕಾಪಾಡುವ ದ್ರವವನ್ನು ಮೆತ್ತುತ್ತದೆ.

ಮೊಟ್ಟೆಯಿಂದ ಹೊರಬರುವ ಮರಿಹುಳುಗಳು ಕಂಬಳಿಹುಳದ ದೇಹದಲ್ಲಿನ ರಸಾಹಾರ ಹಿರುತ್ತ ಚರ್ಮದ ಪೊರೆ ಕಳಚುವಿಕೆಯಿಂದ ಬೆಳವಣಿಗೆ ಹೊಂದಿ ಕೋಶಾವಸ್ಥೆಗೆ ತಲುಪುತ್ತವೆ. ನಂತರ ಕೋಶ ಕಳಚಿ ಪ್ರೌಢ ಕಣಜವಾಗಿ ಹೊರಹೊಮ್ಮುತ್ತವೆ. ಇವು ರೈತರಿಗೆ ಉಪದ್ರವಿಗಳಾದ ಕಂಬಳಿಹುಳುಗಳನ್ನು ಹತೋಟಿಯಲ್ಲಿಡುವುದರಲ್ಲಿ ಪಾತ್ರಧಾರಿಗಳಾಗಿ ಜೈವಿಕ ನಿಯಂತ್ರಕಗಳಾಗಿವೆ ಮತ್ತು ಹೂವಿನ ಮಕರಂದ ಹೀರುತ್ತಾ ಪರಾಗಸ್ಪರ್ಶಕಗಳಾಗಿ ಕಾರ್ಯನಿರ್ವಹಿಸುತ್ತವೆ. ■